

# ಕೈಬೆರಳಲ್ಲ.. ಫಂಗೈ..!

ಕ್ಸಲೇರಿಯಾ ಪಾಲಿಮಾರ್ಫಾ ಎಂಬ ವೈಜ್ಞಾನಿಕ ಹೆಸರುಳ್ಳ ಫಂಗೈ ಜಾತಿಯ ಸಸ್ಯವು ಬ್ರಿಟನ್, ಐರ್ಲೆಂಡ್, ಯೂರೋಪ್ ಹಾಗೂ ಅಮೆರಿಕದ ಉತ್ತರ ಭಾಗಗಳಲ್ಲಿ ಕಂಡುಬರುತ್ತದೆ. ಇದರ ಆಕಾರ ಮನುಷ್ಯನ ಕೈ ಬೆರಳನ್ನು ಹೋಲುತ್ತದೆ. 100ಕ್ಕೂ ಅಧಿಕ ಪ್ರಬೇಧಗಳುಳ್ಳ ಇವುಗಳು ನಿಗುರಿ ಬೆಳೆಯಬಹುದಾದ ದೇಹದ ರಚನೆ ಹೊಂದಿದ್ದು ನೆಲಮಟ್ಟದಿಂದಲೇ ಮೇಲ್ಮಣ್ಣನ್ನು ತಿವಿದು ಹೊರಬಂದಿರುತ್ತವೆ.

ಈ ಫಂಗೈಗಳು ವರ್ಷಪೂರ್ತಿ ಎಲ್ಲ ಋತುಮಾನಗಳಲ್ಲೂ ತಾಳೆ ಮರದ ಟೊಂಗೆಗಳು, ಹೊಂಗೆ ಮರದ ತಳಭಾಗದ ಕೊರಡುಗಳು ಮತ್ತು ಇನ್ನಿತರ ಕೊಳೆತು ಹೋಗುತ್ತಿರುವ ಸಸ್ಯಗಳ ಬೇರು, ಕೊಂಬೆ ಮತ್ತು ಹೊರಚಾಚಿದ ಸಸ್ಯಜೀವಕೋಶದ ಹೊರಚೌಕಟ್ಟುಗಳ ಮೇಲೆ ಬೆಳೆಯುತ್ತವೆ. ಕೊಳೆತ ಅಥವಾ ಕೊಳೆಯುತ್ತಿರುವ ಭಾಗಗಳ ಹೊರಮೇಲ್ಮೈ ಮೇಲೆ ಬೆರಳಿನಾಕಾರದಲ್ಲಿ ಕಂಡುಬರುವ ಈ ಫಂಗೈಗಳು ಹೆಚ್ಚಾಗಿ ಕಪ್ಪುಬಣ್ಣದಿಂದ ಕೂಡಿರುತ್ತದೆ. 1797ರಲ್ಲಿ ಕ್ರಿಶ್ಚಿಯಾನ್ ಹೆಂಡ್ರಿಕ್ ಪರ್ಸೂನ್ ಎಂಬ ಸಸ್ಯಶಾಸ್ತ್ರಜ್ಞ ಈ ಬಗೆಯ ಫಂಗೈಗಳನ್ನು ಗುರುತಿಸಿ ಬೇಸಿಯೋನಿಮ್ ಎಂದು ನಾಮಕರಣ ಮಾಡಿದ್ದ.

ಈ ಬಗೆಯ ಫಂಗೈಗಳು ಕೊಳೆಯುತ್ತಿರುವ ವಸ್ತುಗಳ ತಳದಿಂದ ಗೊಂಚಲು ಅಥವಾ ಗುಂಪು ಗುಂಪಾಗಿ ಮೇಲೆದ್ದು ಬೆಳೆಯುತ್ತವೆ. ಹೆಚ್ಚಾಗಿ ಮೂರರಿಂದ ಆರರಷ್ಟು ಸಂಖ್ಯೆಯಲ್ಲಿ ಮೇಲೆದ್ದು ಬೆಳೆಯುವ ಇವು ನಂತರ ಬಾಗಿ ಬೆರಳುಗಳಂತೆ ಗೋಚರಿಸುತ್ತವೆ. ಪ್ರಾರಂಭದಲ್ಲಿ ಬಿಳಿ ಅಥವಾ ಬೂದು ಬಣ್ಣದಿಂದ ಕೂಡಿರುವ ಇವು ಬೆಳೆಯುತ್ತಾ ಕಂದು ಬಣ್ಣಕ್ಕೆ ತಿರುಗಿ ಕೊನೆಯಲ್ಲಿ ಕಪ್ಪು ಬಣ್ಣಕ್ಕೆ ಪರಿವರ್ತನೆ ಹೊಂದುತ್ತವೆ. ಕೆಲವು ತಳಿಗಳಲ್ಲಿ ಇವು ಹಸಿರು ಅಥವಾ ನೀಲಿ ಛಾಯೆಯಲ್ಲೂ ಕಂಗೊಳಿಸುವುದುಂಟು. ಪ್ರತೀ ಬೆರಳೂ 3 ರಿಂದ 8 ಸೆಂಟಿಮೀಟರ್‌ಗಳಷ್ಟು ಉದ್ದಕ್ಕೆ ಬೆಳೆಯ ಬಲ್ಲವು. ವಸಂತ ಮಾಸದಲ್ಲಿ ಚಿಗುರಿ ಬೆಳೆಯುವ ಫಂಗೈಗಳು ಬೇಸಿಗೆಯ ಅಂತ್ಯದವರೆಗೂ ಇದ್ದು ನಂತರ ಒಣಗಿ ಹೋಗುತ್ತವೆ.



ವಸಂತ ಋತುವಿನಲ್ಲಿ ತಮ್ಮ ದೇಹದ ಮೇಲ್ಮೈ ಮೇಲೆ ಬಿಳಿ ಅಥವಾ ನೀಲಿ ಬಣ್ಣದಿಂದ ಕೂಡಿರುವ ಕೊನಿಡಿಯಾ ಪದರವನ್ನು ಉಂಟು ಮಾಡುತ್ತದೆ. ಅದರ ಸಹಾಯದಿಂದ ಪ್ರಜನನ ರೀತಿಯ ಸಂತಾನೋತ್ಪತ್ತಿಯನ್ನು ನಡೆಸಿಕೊಳ್ಳುವ ಮೂಲಕ ತನ್ನ ಸುತ್ತಲೂ ಹೊಸ ಫಂಗೈಗಳನ್ನು ಹುಟ್ಟು ಹಾಕಿಕೊಳ್ಳುತ್ತದೆ. ಬಹುರೂಪಿ ಹಾಗೂ ವಿಲಕ್ಷಣತೆಗಳಿಂದೊಡಗೂಡಿರುವ ಈ ಫಂಗೈಗಳನ್ನು ತಿನ್ನಬಹುದಾದ ಫಂಗೈಗಳ ಗುಂಪಿಗೆ ಸೇರಿಸಲಾಗಿದೆ. ಜನರು ಇವುಗಳನ್ನು ಆಹಾರವಾಗಿ ಬಳಸುವುದು ರೂಢಿಯಲ್ಲಿದೆ.

■ ಪ.ನಾ.ಹಳ್ಳಿ ಹರೀಶ್ ಕುಮಾರ್